**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಹೊಸದುರ್ಗ**

**ಎಫ್.ಡಿ.ಪಿ 04/2017**
**ಆರ್.ಡಬ್ಲ್ಯೂ. 01**

**ದಿನಾಂಕ 06.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು: ಶ್ರೀ ಎನ್.ಜಿ., ವಕೀಲರಿಂದ ಐ.ಎ. ನಂ. 03 ರಲ್ಲಿರುವ ಅರ್ಜಿದಾರರ ಪರವಾಗಿ:**

1. ಅರ್ಜಿಯಲ್ಲಿ ಬೇಕಮ್ಮಳನ್ನು 14 ನೇ ಎದುರುದಾರಳನನ್ನಾಗಿ ಸೇರಿಸಲಾಗಿದೆ ಎನ್ನುವುದು ಸರಿ. ಬೇಕಮ್ಮಳ ವಾರಸುದಾರರನಾನು ಆಗಿರುವುದಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಅವರು ನನ್ನ ಅತ್ತೆಯಾಗಿರುತ್ತಾರೆ ಎನ್ನುತ್ತಾರೆ. ಬೇಕಮ್ಮಳ ಗಂಡನ ಹೆಸರು ಆದಯ್ಯ ನಾಯ್ಡು ಆಗಿರುತ್ತದೆ. ಬೇಕಮ್ಮಳ ಗಂಡನನ್ನು ಕರವತ್ತಿ ನಾಯ್ಡು ಎಂತಲೂ ಕರೆಯುತ್ತಾರೆ ಎನ್ನುವುದು ಸರಿಯಲ್ಲ. ನನಗೂ ಮಂಡಲ್ ರೆವಿನ್ಯೂ ಆಪೀಸರ್ ರವರಿಗೂ ಯಾವುದೇ ದ್ವೇಷ ಇಲ್ಲ ಎನ್ನುವುದು ಸರಿ.

2. ಪಾಕಳದ ಮಂಡಲ್ ರೆವಿನ್ಯೂ ಅಧಿಕಾರಿಯೂ ಕರವತ್ತಿ ನಾಯ್ಡುರವರನ್ನು ಆದಯ್ಯ ನಾಯ್ಡು ಎಂತಲೂ ಸಹ ಕರೆಯುತ್ತಾರೆ ಎಂದು ದೃಢಿಕ್ಕರಣ ನೀಡಿರುತ್ತಾರೆ ಎನ್ನುವುದು ಸರಿಯಲ್ಲ. ರಾಮಚಂದ್ರ ನಾಯ್ಡು ಬೇಕಮ್ಮಳ ಮಗ ಎನ್ನುವುದು ಸರಿಯಲ್ಲ. ರಾಮಚಂದ್ರ ನಾಯ್ಡುಗೆ ಭಾನುಪ್ರಸಾದ್, ಮಂಜುಳಾ ಮತ್ತು ಚಾರುಮತಿ ಮಕ್ಕಳು ಎನ್ನುವುದು ಸರಿಯಲ್ಲ. ನಿಪಿ-01 ರಿಂದ 10 ನ್ನು ನಾವು ಪ್ರಶ್ನಿಸಿಲ್ಲ ಎನ್ನುವುದು ಸರಿ.

3. 14 ನೇ ಎದುರುದಾರಳ ಯಾವ ವಿಳಾಸವನ್ನು ತೋರಿಸಿರುತ್ತೇವೆಯೋ ಆ ದಾಖಲಾತಿಯನ್ನು ಅರ್ಜಿದಾರರು ಹಾಕಿರುತ್ತಾರೆ ಎನ್ನುವುದು ಸರಿಯಲ್ಲ. 14 ನೇ ಎದುರುದಾರಳಾದ ಬೇಕಮ್ಮ ಮರಣ ಹೊಂದಿದ ನಂತರ ಭಾನುಪ್ರಸಾದ್ ಮತ್ತು ಇತರೆ ಅರ್ಜಿದಾರರು ಅವರ ತಿಥಿ ಕಾರ್ಯಗಳನ್ನು ಮಾಢಿರುತ್ತಾರೆ ಎಂದು

ಸೂಚಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 14 ನೇ ಎದುರುದಾರಳಿಗೆ ಭಾಗ ಇದೆ ಎಂದು ನ್ಯಾಯಾಲಯ ತೀರ್ಮಾನ ಮಾಡಿರುತ್ತದೆ ಎನ್ನುವುದು ಸರಿ. 14 ನೇ ಎದುರುದಾರಳ ಆಸ್ತಿಯನ್ನು ಲಪಾಟಯಿಸುವ ಉದ್ದೇಶದಿಂದ ಅರ್ಜಿದಾರರೆ ಅವರ ವಾರಸುದಾರರಾಗಿದ್ದರು ವಾರಸುದಾರರು ಅಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.